ಎಂದಿಗೂ ನೆರವೇರದ ಕನಸದು' ಅನ್ನಬೇಕೆನಿಸಿ ಬಾಯಿ ಪರಪರ ಅನ್ನುವಾಗಲೂ ತಾನು ಮೌನವಾಗಿ ಬಿಡುತ್ತೇನೆ. ನಾನು ಮೌನವಾದರೆ ವಾರಿಜ ಕೆದಕುವುದಿಲ್ಲ ಸಿಟ್ಟಾದರೂ ಕೆರಳುವುದಿಲ್ಲ. ಮೌನ ಮುಗಿದು ನಾನು ಮತ್ತೆ ಯಾವಾಗ ಹೋಗಿ ಮಾತಾಡಿಸಿದರೂ ಅಷ್ಟೇ ಆಸಕ್ತಿಯಿಂದ ಮಾತಾಡುತ್ತಾಳೆ. ತಾನು ಅವಳ ಮೇಲೆ ಸಿಟ್ಟು ಮಾಡಿಕೊಂಡು ರಂಪಮಾಡಿ ಜಗಳವಾಡಿದ್ದೂ ಇದೆ. ವಾರಿಜಳನ್ನ ಇದ್ಯಾವುದೂ ತಟ್ಟುವುದಿಲ್ಲ, ಅವಳು ಸದಾ ಪ್ರಸ್ತುತ ಸನ್ನಿವೇಶವನ್ನ ವಿಶ್ಲೇಷಣೆ ಮಾಡುತ್ತಿರುತ್ತಾಳೆ. ನಾನು ಅಕಾರಣವಾಗಿ ಮಾಡಿಕೊಂಡ ಸಿಟ್ಟಿಗೂ ಅವಳು ಕಾರಣ ಹುಡುಕುತ್ತಾಳೆ. ಅವಳು ಯಾಕೆ ಹಾಗಿರುತ್ತಾಳೆಂದು ನನಗೆ ಬಹಳಷ್ಟು ಬಾರಿ ವಿಚಿತ್ರವೆನಿಸಿದೆ. ಅಸಲು ಹುಡುಗಿಗೆ ಕೋಪವೇ ಬರುವುದಿಲ್ಲವೇ? ಇದು ಅತ್ಯಂತ ಅಸಹಜ ಅನಿಸಿ ಇದೇ ಕಾರಣಕ್ಕೂ ಅವಳೊಂದಿಗೆ ಜಗಳಾಡಿದ್ದಿದೆ. ಆದರೆ, ವಾರಿಜ ಸದಾ ಹಸನ್ಮುಖಿ.

*****

ಚಂದ್ರಾ ನಮ್ಮನೆಗೆ ಕೆಲಸಕ್ಕೆ ಬರಲು ವಾರಿಜಳೇ ಕಾರಣ. ತಾನು ಅಡುಗೆ ಕೆಲಸಕ್ಕೆ ಹೋಗತೊಡಗಿದ ಮೇಲೆ ಖುದ್ದು ವಾರಿಜಳೆ ಚಂದ್ರಾಳನ್ನ ಕರೆದು ಕೆಲಸಕ್ಕೆ ಸೇರಿಸಿದ್ದಳು. ಮೇಲು ಕೆಲಸ ಅಷ್ಟೇ. ಅಮ್ಮ ಅವಳನ್ನ ಅಡುಗೆಗೆ ಬಿಟ್ಟಿರಲಿಲ್ಲ. ಚಂದ್ರಾ ನನ್ನ ಜೊತೆ ವಯಸ್ಸಿನ ಹುಡುಗಿ, ಒಳ್ಳೆಯ ಚೆಲುವೆ. ಏಳನೇ ಕ್ಲಾಸಿನ ತನಕ ನಮ್ಮೊಂದಿಗೇ ಓದಿದವಳು. ನಂತರದಲ್ಲಿ ಅವಳ ಓದು ನಿಂತುಹೋಗಿತ್ತು. ಬಡತನದ ಜೊತೆಗೆ ಅವಳ ಸುಡು ಸುಡು ಚೆಲುವು ಬೇರೆ. ಹರೆಯದ ಆ ದಿನಗಳಲ್ಲಿ ಚಂದ್ರಾಳನ್ನ ರಾತ್ರಿ ಕನಸಿಗೆ ಕರೆದುಕೊಂಡ ಹುಡುಗರಲ್ಲಿ ನಾನೂ ಒಬ್ಬ. ಅವಳು ನಮ್ಮೂರ ಹುಡುಗರ ಕಣ್ಣಂಚಲ್ಲೇ ಬೆಳೆದವಳು. ಅವಳನ್ನ ಹೊಸ್ತಿಲು ದಾಟದೆ ಬಂಧಿಸಿಡುವುದೆಲ್ಲ ಸಾಧ್ಯವಿರಲಿಲ್ಲ. ಅವಳು ಅಮ್ಮ ಅಪ್ಪನೊಡನೆ ನಿತ್ಯವೂ ಕೆಲಸಕ್ಕೆ ಹೊಗುತ್ತಿದ್ದಳು. ಹಾಗೆ ನಮ್ಮ ತೋಟಕ್ಕೂ ಕೆಲಸಕ್ಕೆ ಬರುವುದಿತ್ತು. ಇನ್ನು ಸಂಜೆಯಾದರೆ ಊರ ಬಾವಿಗೆ ನೀರಿಗೆ ಬರುತ್ತಿದ್ದಳು. ಅವಳ ದಾರಿ ಕಾಯುತ್ತ ನಾವು ಒಂದಷ್ಟು ಹುಡುಗರು ಸದಾ ಬಾವಿ ಕಟ್ಟೆಯ ಅತ್ತಿತ್ತ ಠಳಾಯಿಸುತ್ತಿರುತ್ತಿದ್ದೆವು. ಅವಳು ನಸು ಬಗ್ಗಿ ನೀರು ಸೇದುವಾಗ ಅವಳ ಸೊಬಗಿನ ಹಿಂಭಾಗ, ಅಲ್ಲಿ ಹಾಯಗಿ ಮಲಗಿರುವ ನಾಗರಜಡೆ, ನೀರೆತ್ತಿ ತಲೆಯ ಮೇಲೊಂದು ಬಿಂದಿಗೆಯಿಟ್ಟು, ಕೈಬಿಟ್ಟು ನಾಜೂಕಾಗಿ ಸೊಂಟವನ್ನಷ್ಟು ಬಳುಕಿಸಿ ಮತ್ತೊಂದು ಬಿಂದಿಗೆ ನೀರೆತ್ತಿ ಸೊಂಟದಲ್ಲಿರಿಸಿಕೊಂಡು ಮೆಲುವಾಗಿ ನಡೆಯುತ್ತಿದ್ದರೆ... ಚೆಲುವಿನ ತೇರೊಂದು ಬಳುಕುತ್ತ ಕುಲುಕುತ್ತ ಸಾಗುತ್ತಿರುವಂತೆ ಹಸನಾಗಿ ಕಾಣುತ್ತಿತ್ತು. ಚಂದ್ರಾ ನನ್ನೊಳಗೆ ಕವಿಯನ್ನು ಹುಟ್ಟುಹಾಕಿದವಳು. ಅವಳಿಗಾಗಿ ನಾನು ನನ್ನ ಮೊದಲ ಕವಿತೆ ಬರೆದಿದ್ದೆ. ಅವಳ ಜೊತೆಯ ಹುಡುಗಿಯರ ನಡುವೆ ಅವಳು ಬೆಳಕಿನಂತೆ ಹೊಳೆಯುತ್ತಿದ್ದಳು. ಅವಳಿಗೆ ಅಪರೂಪದ ಚೆಲುವನ್ನೂ ಕಡುಬಡತನವನ್ನೂ ಒಟ್ಟಿಗೇ ಕರುಣಿಸಿದ ಭಗವಂತನನ್ನು ಎಷ್ಟು ಬಯ್ದರೂ ಸಾಕಾಗದು ಅಂತ ನನಗೆ ಅನಿಸುತ್ತಿತ್ತು. ಓರಗೆಯ ಹುಡುಗರಿಗೆಲ್ಲ ನಮ್ಮ ವಿಷಯವಾಗಿ ಒಂದು ಗುಮಾನಿ ಇದ್ದೇಇತ್ತು. ನಮ್ಮನೆಗೆ ಕೆಲಸಕ್ಕೆ ಬರುವ ಹುಡುಗಿಯನ್ನ ಸಮೀಪಿಸೋದು ಅಷ್ಟು ಕಷ್ಟವಲ್ಲ ಅನ್ನುವ ಹೊಟ್ಟೆಕಿಚ್ಚಿನ ಗುಮಾನಿಯದು. ಅವರೆಲ್ಲರ ಗುಮಾನಿಯ ಮಾತುಗಳು ನನ್ನೊಳಗೆ ಸಣ್ಣಗೊಂದು ಆಸೆಯ ಕಿಡಿ ಹಚ್ಚಿ ಅಪಾರ ವಿಶ್ವಾಸವನ್ನೂ ಕೊಟ್ಟುಬಿಟ್ಟಿತ್ತು. ಇವತ್ತಿಗೂ ಅದೆಲ್ಲ ಹಾಗೇ ನೆನಪಿದೆ. ಚಂದ್ರಾ ನಾ ಮುಟ್ಟಿದ ಮೊದಲ ಹೆಣ್ಣು. ವಾರಿಜ ಜೊತೆಗೇ ಇರುತ್ತಿದ್ದರೂ ಅವಳ ಮೇಲೆ ಅಂಥದ್ದೊಂದು ಆಸೆಯೇ ಹುಟ್ಟಿರಲಿಲ್ಲ. ವಾರಿಜ ಅಂಥಾ ಸುಂದರಿಯೂ ಅಲ್ಲ. ಅವಳ ಕೆನ್ನೆಗಳ ಮೇಲೆ ಸದಾ ಮೊಡವೆಗಳ ಹಿಂಡೇ ಕವಿದಿರುತ್ತಿತ್ತು. ಅದಲ್ಲ ಮುಖ್ಯ. ಸದಾ